ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Tuesday, the 11th May 1976/Vaishakha 21, 1898, S.E.

The House met in the Assembly Chamber, Vidhana Soudha at one of the Clock.

[MADAM SPEAKER (SMT. K. S. NAGARATHNAMMA) in the Chair.]

OBITUARY REFERENCE

(*re:* Demise of Sri Siddaveerappa and Sri Abdul Basith.)

ಅಧ್ಯಕ್ಷರು.—ಈ ಕೆಳಕಂಡ ವ್ಯಕ್ತಿಗಳ ನಿಧನದ ಬಗ್ಗೆ ಸಂತಾಪ ಸೂಚಿಸಲು ನಾನು ವಿಷಾಧಿಸುತ್ತೇನೆ,

ಶಿವಮೊಗ್ಗ ಜಿಲ್ಲೆಯಿಂದ ೧೯೪೫ ರಿಂದ ೧೯೪೯ರವರೆಗೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ ಶ್ರೀ ಸಿದ್ದವೀರಪ್ಪನವರು ತಾರಿಖು ೨೭ನೇ ಏಪ್ರಿಲ್ ೧೯೭೬ ರಂದು ನಿಧನರಾದರು.

೧೯೪೨ ರಿಂದ ೧೯೪೯ರ ವರೆಗೆ ಮೂಜಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಎಂ.ಅಬ್ದುಲ್ ಬಾಸಿತರವರು ತಾರಿಖು ೧೮ನೇ ಏಪ್ರಿಲ್ ೧೯೭೬ ರಂದು ನಿಧನರಾದರು.

ಶ್ರೀಯುತರುಗಳಾದ ಸಿದ್ದವೀರಪ್ಪ, ಎಂ. ಅಬ್ದುಲ್ ಬಾಸಿತ್ ಅವರುಗಳ ನಿಧನದ ಬಗ್ಗೆ ಸಂತಾಪ ವನ್ನು ಸೂಚಿಸುವಲ್ಲಿ ಹಾಗೂ ದಿವಂಗತರ ಕುಟುಂಬ ವರ್ಗದವರಿಗೆ ಈ ಸಭೆಯ ಸಂತಾಪ ವ್ಯಕ್ತ ಪಡಿಸುವಲ್ಲಿ ತಾವೆಲ್ಲರೂ ನನ್ನೊಡನೆ ಭಾಗವಹಿಸುವಂತೆ ಕೋರುತ್ತೇನೆ.

ತಾವೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸುವ ಮೂಲಕ ದಿವಂಗತರಿಗೆ ಗೌರವ ವನ್ನು ಸೂಚಿಸಬೇಕೆಂದು ಕೋರುತ್ತೇನೆ.

(ಸಭೆಯುಒಂದು ನಿಮಿಷ ಕಾಲ ಎದ್ದುನಿಂತು ಮೌನವನ್ನಾಚರಿಸಿತು)

STARRED QUESTIONS

(to which oral Answers were given)

ಅಧ್ಯಕ್ಷರು.—ಪ್ರಶ್ನೆ ೫೦೬ ಶ್ರೀ ದೊರೆಸ್ವಾಮಿ ನಾಯ್ಡುರವರು ಪ್ರಶ್ನೆಯನ್ನು ಶ್ರೀ ಶ್ರೀನಿವಾಸಾಲಂ ನಾಯ್ಡುರವರು ಕೇಳಬಹುದು.